ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ.ನಂ. 120/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಬಸವರಾಜ್ ಚಿಂಚೋಳಿ | P.W | 4 |
| ತಂದೆಯ ಹೆಸರು | ಸಿದ್ದರಾಮಪ್ಪ | C.W | 1 |
| ವಯಸ್ಸು | 32 ವರ್ಷ | | |
| ಉದ್ಯೋಗ | ಪಿ ಎಸ್ ಐ, ಸಿ.ಎನ್ ಠಾಣೆ , ಮಂಡ್ಯ | ಪ್ರ.ವ.ಬೋ | |
| ವಾಸಸ್ಥಳ | ಮಂಡ್ಯ | ದಿನಾಂಕಃ 05.11.2025 | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು ನವೆಂಬರ್ 2020 ರಿಂದ ಫೆಬ್ರವರಿ 2022 ರ ವರೆಗೆ ಸಕಲೇಶಪುರ ನಗರ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕಃ 21.07.2021 ರಂದು ಬೆಳಗ್ಗೆ 8.30 ರ ಸಮಯದಲ್ಲಿ ಸಕಲೇಶಪುರ ಠಾಣಾ ವ್ಯಾಪ್ತಿಯಲ್ಲಿ ಗಸ್ತು ನಿರ್ವಹಿಸುತ್ತಿರುವಾಗ ಅರೇಹಳ್ಳಿ ಕಡೆಯಿಂದ ಮಾರುತಿ 800 ಕಾರು ಕೆ ಎ 24 ಎಂ 2535 ವಾಹನದಲ್ಲಿ ಅಕ್ರಮವಾಗಿ ಗೋಮಾಂಸವನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ನಾನು ಮತ್ತು ಚಾಸಾ 4 ರವರು ಅರೇಹಳ್ಳಿ ಕಡೆಗೆ ತೆರಳಿರುತ್ತೇವೆ. ಆ ಸಮಯದಲ್ಲಿ ಅರೇಹಳ್ಳಿ ಕಡೆಯಿಂದ ಮಾರುತಿ 800 ಕಾರು ಬರುತ್ತಿದ್ದು, ನಾನು ಸದರಿ ಕಾರನ್ನು ನಿಲ್ಲಿಸಿ ವಿಚಾರಿಸಿದಾಗ ಸದರಿ ಕಾರಿನಲ್ಲಿ ನಜೀರ್ ಎಂಬುವವರು ಚಾಲಕನಾಗಿದ್ದು, ಸದರಿ ಕಾರಿನಲ್ಲಿ ತಲಾ ಒಂದೊಂದು ಕೆ ಜಿ ಯ ಆರು ಗೋಮಾಂಸ ತುಂಬಿದ ಪ್ಯಾಕೆಟ್ ಗಳು ಪತ್ತೆಯಾಗಿರುತ್ತವೆ. ಸದರಿ ಗೋಮಾಂಸವನ್ನು

ಮಾರಾಟ ಮಾಡಲು ಪರವಾನಗೆ ಇದೆಯೇ ಎಂದು ಆತನ ಬಳಿ ವಿಚಾರಿಸಿದಾಗ, ಆರೋಪಿಯು ಯಾವುದೇ ಪರವಾನಗೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ ನಂತರ ಸ್ದಳಕ್ಕೆ ಪಂಚರನ್ನು ಬರಮಾಡಿಕೊಂಡು ಬೆಳಗ್ಗೆ 8.45 ರಿಂದ 9.45 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ನಂತರ ಗೋಮಾಂಸ ಮತ್ತು ಕೃತ್ಯಕ್ಕೆ ಬಳಸಿದ ಕಾರನ್ನು ಅಮಾನ್ತುಪಡಿಸಿಕೊಂಡಿರುತ್ತೇನೆ. ನಂತರ ಬೆಳಗ್ಗೆ 10.00 ಗಂಟೆಗೆ ಠಾಣೆಗೆ ಬಂದು ಆರೋಪಿ ಮತ್ತು ಅಮಾನತ್ತುಪಡಿಸಿಕೊಂಡಿದ್ದ ಮುದ್ದೆ ಮಾಲನ್ನು ಠಾಣಾ ಎಸ್ ಹೆಚ್ ಒ ರವರ ಮುಂದೆ ಹಾಜರುಪಡಿಸಿ ಮುಂದಿನ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿರುತ್ತೇನೆ.

ನಿಪಿ 1 ಮಹಜರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು , ಸಾಕ್ಷಿದಾರರ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ಅಮಾನತ್ತುಪಡಿಸಿಕೊಂಡ ಕಾರಿನ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು. ಗೋಮಾಂಸದ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ಆರೋಪಿಯನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಪಿ ವಕೀಲರಿಂದಃ</u>**

ದಿಃ 21-07-2021 ರಂದು ಬೆಳಗ್ಗೆ 8.00 ಗಂಟೆಗೆ ನಾನು ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಸದರಿ ದಿನ ನಾನು ಸಕಲೇಶಪುರದ ಬಿ ಎಂ ರಸ್ತೆ, ಆಜಾದ್ ರಸ್ತೆ ಮತ್ತು ಕುಶಾಲನಗರ ಬಡಾವಣೆಗಳಲ್ಲಿ ಗಸ್ತು ಕಾರ್ಯ ಮಾಡಿರುತ್ತೇನೆ, ಸದರಿ ಸಮಯದಲ್ಲಿ ನನ್ನ ಜೊತೆ ಚಾಸಾ 4 ರವರು ಹಾಜರಿದ್ದರು. ನಾವು ಬಿ ಎಂ ರಸ್ತೆಯಲ್ಲಿ ಗಸ್ತು ಕಾರ್ಯ

ಮಾಡುತ್ತಿರುವಾಗ ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಬಂದಿರುತ್ತದೆ. ನಾವು ಅರೇಹಳ್ಳಿ ರಸ್ತೆಯಲ್ಲಿ ನಿಖರವಾಗಿ ಎಲ್ಲಿ ವಾಹನವನ್ನು ತಪಾಸಣೆ ಮಾಡಲು ನಿಂತಿರುತ್ತೇವೆ ಎಂದು ನನಗೆ ಈಗ ನೆನಪಿಲ್ಲ. ಸದರಿ ವಾಹನವನ್ನು ನಾನು 100 ಮೀಟರ್ ಅಂತರದಿಂದ ನೋಡಿರುತ್ತೇನೆ. ಕಾರಿನ ಚಾಲಕನು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿರುವುದಿಲ್ಲ. ಕಾರಿನಲ್ಲಿ ಆ ದಿನ ಆರೋಪಿ ಒಬ್ಬರೇ ಹಾಜರಿದ್ದರು. ಗೋಮಾಂಸವು ಕಾರಿನ ಹಿಂಬದಿ ಸೀಟಿನಲ್ಲಿ ಇತ್ತು. ಸದರಿ ಕಾರಿನಲ್ಲಿ ಗೋಮಾಂಸ ತುಂಬಿದ ಒಟ್ಟು 6 ಪ್ಯಾಕೆಟ್ ಗಳು ಇದ್ದವು. ಸದರಿ ಪ್ಯಾಕೇಟ್ ಗಳು ಕಪ್ಪು ಬಣ್ಣದ್ದಾಗಿದ್ದವು. ಸದರಿ ಮಾಂಸ ಗೋಮಾಂಸ ಎಂದು ನಾನೇ ನಿರ್ಧರಿಸಿರುತ್ತೇನೆ. ಯಾವುದೇ ಮಾಂಸವನ್ನು ನೋಡಿ ಸದರಿ ಮಾಂಸವು ಯಾವುದರ ಮಾಂಸ ಎಂದು ಗುರುತಿಸುವ ಬಗ್ಗೆ ನಾನು ಯಾವುದೇ ತರಬೇತಿ ಪಡೆದಿರುವುದಿಲ್ಲ. ಆರೋಪಿಯ ಬಳಿ ಸದರಿ ಗೋಮಾಂಸವನ್ನು ಎಲ್ಲಿಂದ ತಂದಿರುವುದಾಗಿ ನಾನು ವಿಚಾರಿಸಿರುತ್ತೇನೆ. ಆದರೆ ಆರೋಪಿಯು ಯಾವುದೇ ಸಮಂಜಸ ಉತ್ತರ ನೀಡಿರುವುದಿಲ್ಲ.

ಸದರಿ ಕಾರನ್ನು ತಪಾಸಣೆ ಮಾಡುವ ಸಮಯದಲ್ಲಿ ಸುಮಾರು 20 ಜನರು ಸೇರಿದ್ದರು. ಗೋಮಾಂಸ ಪತ್ತೆಯಾದ ಬಗ್ಗೆ ಉಪ ವಿಭಾಗಾಧಿಕಾರಿಗೆ ನಾನು ಮಾಹಿತಿ ನೀಡಿರುವುದಿಲ್ಲ. ಉಪ ವಿಭಾಗಾಧಿಕಾರಿಯವರನ್ನು ಸ್ಥಳಕ್ಕೆ ಬರುವಂತೆ ನಾನು ತಿಳಿಸಿರುವುದಿಲ್ಲ. ಮಹಜರನ್ನು ನಾನೇ ಬರೆದಿರುತ್ತೇನೆ. ಛಾಯಾಚಿತ್ರಗಳನ್ನು ಚಾಸಾ 4 ರವರು ತೆಗೆದಿರುತ್ತಾರೆ. ತಕ್ಷೀರು ಸ್ಥಳದಲ್ಲಿ ಯಾವುದೇ ಛಾಯಾಚಿತ್ರಗಳನ್ನು ತೆಗೆದಿರುವುದಿಲ್ಲ. ಛಾಯಾಚಿತ್ರಗಳನ್ನು ಗ್ರಾಮಾಂತರ ಠಾಣೆಯ ಹಿಂಭಾಗದಲ್ಲಿ ವಾಹನ ನಿಲುಗಡೆ ಸ್ಥಳದಲ್ಲಿ ತೆಗೆದಿರುತ್ತೇನೆ. ನಿಪಿ 3 ರಿಂದ 5 ಛಾಯಾಚಿತ್ರಗಳ ಬಗ್ಗೆ ಸಿ.ಡಿ ಹಾಜರುಪಡಿಸಿಲ್ಲ ಎಂದರೆ

ಸರಿ. ನಿ.ಪಿ 3 ಮತ್ತು 4 ಛಾಯಾಚಿತ್ರಗಳನ್ನು ಸಕಲೇಶಪುರ ನಗರ ಠಾಣೆಯಲ್ಲಿ ತೆಗೆದಿರುತ್ತದೆ ಎಂದರೆ ಸರಿ. ಗೋಮಾಂಸ ಪತ್ತೆಯಾದ ಸಮಯದಲ್ಲಿ ತಕ್ಷೀರು ಸ್ಥಳಕ್ಕೆ ಪಶುವೈದ್ಯಾಧಿಕಾರಿಯನ್ನು ಕರೆಸಿರುವುದಿಲ್ಲ. ತಕ್ಷೀರು ಸ್ಥಳದಲ್ಲಿ ಮಾದರಿಗಾಗಿ ಗೋಮಾಂಸವನ್ನು ತೆಗೆದಿರುವುದಿಲ್ಲ. ತಕ್ಷೀರು ಸ್ಥಳದಲ್ಲಿ ಪಂಚರ ಸಹಿಯನ್ನು ಮಹಜರ್ ಗೆ ಪಡೆದುಕೊಂಡಿರುತ್ತೇನೆ. ಪಂಚರಿಗೆ ನಾನು ನೋಟೀಸ್ ನೀಡಿರುತ್ತೇನೆ. ಮುದ್ದೆ ಮಾಲುಗಳಿಗೆ ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಿರುವುದಿಲ್ಲ. ನಿಪಿ 5 ಛಾಯಾಚಿತ್ರವನ್ನು ಪೊಲೀಸ್ ಠಾಣೆಯಲ್ಲಿ ತೆಗೆದಿರುತ್ತೇವೆ. ನಿಪಿ 5 ಛಾಯಾಚಿತ್ರ ತೆಗೆಯುವ ಸಮಯದಲ್ಲಿ ಪಶುವೈದ್ಯಾಧಿಕಾರಿಯನ್ನು ಸ್ಥಳಕ್ಕೆ ಕರೆಸಿರುವುದಿಲ್ಲ. ಮಹಜರ್ ಗೆ ಪ್ರ ವ ವ ದಾಖಲು ಮಾಡಿದ ನಂತರ ಕ್ರೈಂ ನಂಬರ್ ನೀಡುತ್ತೇವೆ ಎಂದರೆ ಸರಿ. ಮಾಹಿತಿ ಬಂದ ನಂತರ ಪ್ರ ವ ವ ದಾಖಲು ಮಾಡಿ ಸ್ಥಳಕ್ಕೆ ಹೋಗಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿಯು ತಪ್ಪಿಸಿಕೊಳ್ಳುವ ಸಂಭವ ಇದ್ದ ಕಾರಣ ಪ್ರ ವ ವ ಅನ್ನು ಮೊದಲು ದಾಖಲು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ತೇಜಸ್ವಿ ಸರ್ಕಲ್ ನಿಂದ ನಮ್ಮ ಠಾಣೆಗೆ ಒಂದೂವರೆ ಕಿ ಮಿ ಅಂತರ ಇರುತ್ತದೆ. ತೇಜಸ್ವಿ ಸರ್ಕಲ್ ನಿಂದ ಠಾಣೆಗೆ ಬರಲು 5 ನಿಮಿಷ ಸಾಕಾಗುತ್ತದೆ ಎಂದರೆ ಸಾಕ್ಷಿಯು ವಾಹನ ದಟ್ಟಣೆ ಇರುವುದರಿಂದ ಜಾಸ್ತಿ ಸಮಯಾವಕಾಶ ಬೇಕಾಗುತ್ತದೆ ಎಂದು ನುಡಿಯುತ್ತಾರೆ. ಮಹಜರ್ ಮಾಡುವ ಪೂರ್ವದಲ್ಲಿ ಸಿಬ್ಬಂದಿಯನ್ನು ಠಾಣೆಗೆ ಕಳುಹಿಸಿ ಪ್ರ ವ ವ ದಾಖಲು ಮಾಡಲು ನನಗೆ ತೊಂದರೆ ಇರಲಿಲ್ಲ. ದೂರವಾಣಿ ಮೂಲಕ ಮಾಹಿತಿ ನೀಡಿ ಪ್ರ ವ ವ ದಾಖಲು ಮಾಡಲು ನನಗೆ ತೊಂದರೆ ಇರಲಿಲ್ಲ.

ನಾನು ಸದರಿ ದಿನ ಯಾವುದೇ ಗಸ್ತು ಕಾರ್ಯ ಮಾಡಿರುವುದಿಲ್ಲ ಎಂದರೆಸ ರಿಯಲ್ಲ. ನಾನು ಯಾವುದೇ ಮುದ್ದೆ ಮಾಲುಗಳನ್ನು ಆರೋಪಿಯಿಂದ ವಶಕ್ಕೆ ಪಡೆದಿರುವುದಿಲ್ಲ

ಎಂದರೆ ಸರಿಯಲ್ಲ. ನಿಪಿ 1 ಮಹಜರನ್ನು ಠಾಣೆಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಪಂಚರ ಸಹಿಯನ್ನು ನಿಪಿ 1 ದಾಖಲೆಗೆ ಠಾಣೆಯಲ್ಲಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ಮಹಜರ್ ನಲ್ಲಿ ಕ್ರೈಂ ನಂಬರನ್ನು ಠಾಣೆಯಲ್ಲಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಕ್ಕೋಸ್ಕರ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮ್ಮುಖದಲ್ಲಿ ಮುದ್ದೆಮಾಲು ನಾಶಪಡಿಸಿರುವುದಿಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.